ಆಮೇಲೆ ಕುಂದಾ ಕೆಲಸ ಮುಗಿಸಿ ಸರಸರನೆ ಹೊರಟು ಬಿಡುವಳು. ಫ್ಲ್ಯಾಟ್‌ನ ಬಾಗಿಲು ಎಳೆದುಕೊಳ್ಳುವಳು. 'ಕುಂದಾ ಕಾಮತ್ –ಬಿ.ಎ.' ಈ ಫಲಕವನ್ನು ಮೆರೆಸುತ್ತಾ ಬಾಗಿಲು ಮುಚ್ಚಿಕೊಳ್ಳುವುದು. ಕುಂದಾ ಸರಸರನೆ ಲಿಫ್ಟ್ ಇರುವ ದಿಕ್ಕಿಗೆ ಹೋಗುತ್ತಾಳೆ. ಲಿಫ್ಟ್ ಬಟನ್ ಒತ್ತುತ್ತಾಳೆ. ಲಿಫ್ಟಿನ ಕೆಂಪು ತ್ರಿಕೋನ ಬೆಳಗುತ್ತದೆ. ಲಿಫ್ಟ್, ಕುಂದಾಳ ಮಹಡಿಗೆ ಬಂದು ನಿಲ್ಲುತ್ತದೆ.

ಕುಂದಾ ಒಳಗೆ ಹೋಗಿ ತಳಮಹಡಿಯ ಬಟನ್ ಒತ್ತುತ್ತಾಳೆ. ಕೆಳಗೆ ಬಂದು ತಲುಪಿದ ಬಳಿಕ ಅವಳು ಸ್ಟೇಶನ್ ದಾರಿ ಹಿಡಿದು ಹೋಗುತ್ತಾಳೆ. ಜನಜಂಗುಳಿಯಲ್ಲಿ ಬೆರೆಯುತ್ತಾಳೆ. ಈಗ ಅವಳು ಕುಂದಾ ಆಗಿ ಉಳಿಯುವುದಿಲ್ಲ. ಗುಂಪಿನಲ್ಲಿ 'ಇಂತಹವನು', 'ಅಂತಹವನು' ಎಂಬುದು ಇರುವುದಿಲ್ಲ. ಚಲಿಸುವ  ಗುಂಪಿನಲ್ಲಿ ಎಲ್ಲರೂ ಹನಿಗಳಾಗಿ ಬೆರೆತು ಸಾಗುವರು. ಮುಂದೆ ಕ್ರಮಿಸುವವರು ಮೊದಲು ನೇರವಾಗಿ, ಆಮೇಲೆ ಎಡಕ್ಕೆ, ಆಮೇಲೆ ಬಲಕ್ಕೆ, ತಮ್ಮ ತಮ್ಮ ದಿಕ್ಕಿಗೆ ಹೋಗುವರು.

ಫ್ಲಾಟ್‌ಫಾರ್ಮಿನಲ್ಲಿ ಎಂದಿನ ಹಾಗೆ ಕಿಕ್ಕಿರಿದ ಜನಸಂದಣಿ. ಎಲ್ಲರಿಗೂ ಅವಸರ. ಸಮಯಕ್ಕೆ ಸರಿಯಾಗಿ ಕಚೇರಿ ತಲುಪುವ ನಿಷ್ಠೆ.

ದಿನನಿತ್ಯದ ಲೋಕಲ್, ದಿನನಿತ್ಯದ ಹೆಂಗಸರ ಡಬ್ಬಿ, ಅದರಲ್ಲಿ ಒಳಗೆ ಸರಿದುಕೊಳ್ಳಬೇಕು. ಇದು ತಪ್ಪಿದರೆ ಎಲ್ಲವೂ ತಪ್ಪಿ ಹೋಗುತ್ತದೆ. ಲೇಡಿಸ್ ಡಬ್ಬಿಯ ಬಾಗಿಲಲ್ಲಿಯೂ ಹೆಂಗಸರು ನಿಂತಿದ್ದಾರೆ. ಹತ್ತುವವರಿಗೆ ಸುಲಭವಾಗಿ ಹತ್ತುವುದು ಸಾಧ್ಯವಿಲ್ಲ. ಇಳಿಯುವವರಿಗೆ ಸುಲಭವಾಗಿ ಇಳಿಯುವುದು ಸಾಧ್ಯವಿಲ್ಲ. ಇಳಿಯಿರಿ ಅಥವಾ ಹತ್ತಿರಿ–ಗಾಡಿಗೆ ನಿಮಗಾಗಿ ನಿಲ್ಲಿಸಿದ ಸಮಯಕ್ಕಿಂತ ಹೆಚ್ಚು ನಿಲ್ಲಲು ಸಮಯವಿಲ್ಲ. ಕುಂದಾ ಜನಜಂಗುಳಿಯಲ್ಲಿ ನುಸುಳಿ ಡಬ್ಬಿಯ ಒಳಗೆ ನುಗ್ಗುತ್ತಾಳೆ.

ಡಬ್ಬಿಯೊಳಗೆ ಎಂದಿನ ಪರಿಚಿತ ಸ್ನೇಹಿತೆಯರು. ಹೆಣೆಗೆಯಲ್ಲಿ ನಿರತರಾಗಿರುವವರು, ಓದುವವರು, ರಂಗೇರಿದ ಮಾತುಕತೆಯಲ್ಲಿ ತಲ್ಲೀನರಾಗಿರುವವರು. ಕುಂದಾಳನ್ನು ನೋಡಿ ಅವರು ಅತ್ತಿತ್ತ ಸರಿದು ಅವಳಿಗೆ ಕುಳಿತುಕೊಳ್ಳಲು ಅವಕಾಶ ಮಾಡಿಕೊಡುತ್ತಾರೆ. ಗಾಡಿಯಲ್ಲಿ ಸಮಯ ಸಟಸಟನೆ ಕಳೆದುಹೋಗುತ್ತದೆ. ಜನಸಂದಣಿಯ ನಡುವೆ ಇಳಿಯುವ ಚಿಂತೆಯಲ್ಲಿ ಕುಂದಾ ಬಾಗಿಲ ಬಳಿ ಬಂದು ನಿಂತುಕೊಳ್ಳುತ್ತಾಳೆ. ಇಳಿಯುವವರ ಚಲನೆಯೊಂದಿಗೆ ಬೆರೆತು ಸುಲಭವಾಗಿ ಫ್ಲಾಟ್‌ಫಾರ್ಮ್ ತಲುಪುತ್ತಾಳೆ. ಸ್ಟೇಷನ್ ಹತ್ತಿರವೇ ಅವಳ ಕಚೇರಿ ಇದೆ. ಅವಳು ಸರಸರನೆ ನಡೆಯಲಾರಂಭಿಸುತ್ತಾಳೆ.

ಕುಂದಾ ತನ್ನ ಟೇಬಲ್ ಬಳಿ ಬಂದು ಉಸ್ಸಪ್ಪಾ ಎನ್ನುತ್ತಾ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಾಳೆ. ಸ್ವಲ್ಪ ಹೊತ್ತು ಅವಳಿಗೆ ವಿಶ್ರಾಂತಿ ಬೇಕಾಗುತ್ತದೆ. ನಾಲ್ಕೈದು ಮೇಜು ದಾಟಿ ಹೆಡ್‌ಕ್ಲರ್ಕ್ ದೇಸಾಯಿ ಕುಳಿತುಕೊಳ್ಳುತ್ತಾನೆ. ಕುಂದಾ ಬಂದ ಕೂಡಲೇ ಅವಳೆಡೆಗೆ ನೋಟ ಹರಿಸುವುದು ದೇಸಾಯಿಯ ನಿತ್ಯಕ್ರಮ. ಅವನ ನೋಟದಲ್ಲಿ ಕುಂದಾಳ ಕುರಿತು ಮೆಚ್ಚುಗೆ ಸ್ಪಷ್ಟವಾಗಿರುತ್ತದೆ. ಆದರೆ ಕುಂದಾಳ ಗಮನ ಅವನ ಕಡೆಗೆ ಇರುವುದಿಲ್ಲ.

ಕುಂದಾ ಇರುವುದು ಹೀಗೆ.

ಆದರೆ ಇಷ್ಟು ಹೇಳಿದರೆ ಕುಂದಾಳ ಪೂರ್ಣ ಪರಿಚಯ ಸಿಗುವುದಿಲ್ಲ. ಸಾಮಾನ್ಯ ಬದುಕು ಸಾಗಿಸುವ ಅವಳು ಒಬ್ಬ ಸಾದಾ ಸರಳ ಹುಡುಗಿ ಎಂದು ಮಾತ್ರ ಗಮನಕ್ಕೆ ಬರುತ್ತದೆ. ಇನ್ನೂ ಹೆಚ್ಚಿನ ಮಾಹಿತಿ ಎಂದರೆ ಕುಂದಾ ಮೂವತ್ತೈದು ದಾಟಿದ್ದಾಳೆ. ಆದರೆ ಇದುವರೆಗೆ